## ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಸಂಡೂರು.

**OS. No. 180/2021** **P.W. 01**

ದಿನಾಂಕ 03-01-2024 ರಂದು ಪ್ರಮಾಣ ವಚನ ಮಾಡಿಸಲಾಯಿತು.

**1 ನೇ ಪ್ರತಿವಾದಿ ಪರ ಪಾಟೀ ಸವಾಲು ಶ್ರೀ ಹೆಚ್ ಎಂ ಕೆ ವಕೀಲರಿಂದ**

* * * *

ದಾವಾ ಸ್ವತ್ತು ನಮ್ಮ ತಂದೆಗೆ ಸರಕಾರದವರು 2003 ರಲ್ಲಿ ಮಂಜೂರು ಮಾಡಿರುತ್ತಾರೆ. ದಾವಾ ಸ್ವತ್ತಿನಲ್ಲಿ ನಮ್ಮ ತಂದೆ ಸಾಕಷ್ಟು ವರ್ಷಗಳಿಂದ ವ್ಯವಸಾಯವನ್ನು ಮಾಡುತ್ತಿದ್ದಾರೆ ಎಂದರೆ ಸರಿ. ನಮ್ಮ ತಂದೆಗೆ ಒಟ್ಟು ಇಬ್ಬರೂ ಹೆಂಡತಿಯರು ಎಂದರೆ ಸರಿಯಲ್ಲ. ನಮ್ಮ ತಂದೆಗೆ ಮೋದಲನೇ ಹೆಂಡತಿ ಈರಮ್ಮ ಎಂದರೆ ಸರಿಯಲ್ಲ. ಸದರಿ ಈರಮ್ಮ ಎಂದರೆ ಒಟ್ಟು 2 ಮಕ್ಕಳು ಇರುತ್ತಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯ ಮೋದಲನೆ ಹೆಂಡತಿ ಮತ್ತು ಆಕೆಯ ಮಕ್ಕಳಿಗೆ ಈ ದಾವೆಯಲ್ಲಿ ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು ತಮ್ಮ ತಂದೆಗೆ ತಮ್ಮ ತಾಯಿ ಮಾತ್ರ ಹೆಂಡತಿ ಎಂದು ಹೇಳುತ್ತಾರೆ. ನಮ್ಮ ತಂದೆಗೆ ಮೋದಲನೇ ಹೆಂಡತಿ ಈರಮ್ಮ ಮತ್ತು ಆಕೆಯ ಮಕ್ಕಳು ಇದ್ದರು ಸಹ ಅವರಿಗೆ ಭಾಗ ಕೊಡಬಾರದು ಎನ್ನುವ ಉದ್ದೇಶದಿಂದ ಅವರನ್ನು ಈ ದಾವೆಯಲ್ಲಿ ಸೇರಿಸದೆ ಈ ದಾವೆಯನ್ನು ಹೂಡಿರುತ್ತೇವೆ ಎಂದರೆ ಸಾಕ್ಷಿಯು ತಮ್ಮ ತಾಯಿ ತಮ್ಮ ತಂದೆಗೆ ಮೋದಲನೆ ಹೆಂಡತಿ ಮತ್ತು ಈರಮ್ಮ 2 ನೇ ಹೆಂಡತಿ ಎಂದು ಹೇಳುತ್ತಾರೆ.

ದಾವಾ ಸ್ವತ್ತು 1 ನೇ ಪ್ರತಿವಾದಿಯ ಸ್ವಯಾರ್ಜಿ ಆಸ್ತಿಯಾಗಿರುವುದರಿಂದ 1 ನೇ ಪ್ರತಿವಾದಿ ಬದುಕಿರುವಾಗ ಅದರಲ್ಲಿ ನಮಗೆ ಭಾಗ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಈರಮ್ಮ ಮತ್ತು ಅವರ ಮಕ್ಕಳೊಂದಿಗೆ ಈಗ ವಾಸವಾಗಿದ್ದಾರೆ ಎಂದರೆ ಸರಿ. ಪ್ರತಿವಾದಿಗಳಿಗೆ ತೋಂದರೆ ಕೊಡಲು ಈ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ನಮ್ಮ ತಂದೆ ಸಾಗುವಳಿಯನ್ನು ಮಾಡುತ್ತಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನಮ್ಮ ತಂದೆ ಇರುವವರೆಗೂ ನಮಗೆ ಯಾವುದೆ ಭಾಗ ಇರುವುದಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

**ಪ್ರ.ದ.ನ್ಯಾ.ದಂ., ಸಂಡೂರು.**